ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 3, July-August 2026, Pp. 51-56
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಹೊಳಲೂರು ಮತ್ತು ಮಡಿಕೆ ಬೇಲೂರಿನ ಶಿಲಾಯುಗ ಕಾಲದ ಬಂಡೆ ರೇಖಾಚಿತ್ರ ವಿಶ್ಲೇಷಣೆ

**ತಿಪ್ಪೇಶ್ ಎಸ್**
ಸಂಶೋಧನಾ ವಿದ್ಯಾರ್ಥಿ, ಇತಿಹಾಸ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು

***Abstract:***
*ಹೊಳಲೂರು ಮತ್ತು ಮಡಿಕೆ ಬೇಲೂರು ಪ್ರದೇಶಗಳಲ್ಲಿ ಕಂಡುಬರುವ ಶಿಲಾಯುಗ ಕಾಲದ ಬಂಡೆ ರೇಖಾಚಿತ್ರಗಳು ಪ್ರಾಚೀನ ಮಾನವನ ಜೀವನಶೈಲಿ, ನಂಬಿಕೆಗಳು ಹಾಗೂ ಸಾಂಸ್ಕೃತಿಕ ಅಭಿವ್ಯಕ್ತಿಗಳನ್ನು ಅರ್ಥಮಾಡಿಕೊಳ್ಳಲು ಪ್ರಮುಖ ಪುರಾತತ್ವ ಆಧಾರಗಳಾಗಿವೆ. ಈ ಅಧ್ಯಯನವು ಬಂಡೆ ರೇಖಾಚಿತ್ರಗಳ ವಿಷಯವಸ್ತು, ಆಕೃತಿ ವಿನ್ಯಾಸ, ಚಿತ್ರಣ ತಂತ್ರ, ಸಂಕೇತಗಳು ಮತ್ತು ಶೈಲಿಯ ವೈಶಿಷ್ಟ್ಯಗಳನ್ನು ವಿಶ್ಲೇಷಿಸುತ್ತದೆ. ಬೇಟೆ, ಪ್ರಾಣಿಗಳು, ಮಾನವ ಆಕೃತಿಗಳು ಹಾಗೂ ದೈನಂದಿನ ಬದುಕಿಗೆ ಸಂಬಂಧಿಸಿದ ಚಿತ್ರಣಗಳು ಅಂದಿನ ಸಾಮಾಜಿಕ ಮತ್ತು ಪರಿಸರ ಸಂಬಂಧಗಳನ್ನು ಪ್ರತಿಬಿಂಬಿಸುತ್ತವೆ. ಚಿತ್ರಗಳ ಸ್ವರೂಪ ಮತ್ತು ಸ್ಥಳೀಯ ಭೌಗೋಳಿಕ ಪರಿಸರದ ನಡುವಿನ ಸಂಬಂಧವನ್ನು ಅಧ್ಯಯನ ಮಾಡುವ ಮೂಲಕ ಶಿಲಾಯುಗದ ಜನರ ಜೀವನಾನುಭವಗಳನ್ನು ಗುರುತಿಸಲು ಪ್ರಯತ್ನಿಸಲಾಗಿದೆ. ಈ ರೇಖಾಚಿತ್ರಗಳು ಕೇವಲ ಕಲಾತ್ಮಕ ಅಭಿವ್ಯಕ್ತಿಗಳಲ್ಲದೆ, ಪ್ರಾಚೀನ ಮಾನವನ ಜ್ಞಾನ, ಸಂವಹನ ಪದ್ಧತಿ ಮತ್ತು ಸಾಂಸ್ಕೃತಿಕ ಸ್ಮೃತಿಯ ಸಂಕೇತಗಳಾಗಿವೆ. ಆದ್ದರಿಂದ ಹೊಳಲೂರು ಮತ್ತು ಮಡಿಕೆ ಬೇಲೂರಿನ ಬಂಡೆ ರೇಖಾಚಿತ್ರಗಳ ವೈಜ್ಞಾನಿಕ ದಾಖಲಾತಿ ಮತ್ತು ಸಂರಕ್ಷಣೆ ಕರ್ನಾಟಕದ ಪ್ರಾಗೈತಿಹಾಸಿಕ ಪರಂಪರೆಯ ಅಧ್ಯಯನಕ್ಕೆ ಮಹತ್ವದ್ದಾಗಿದೆ.*

***Keywords:*** *ಹೊಳಲೂರು, ಮಡಿಕೆ ಬೇಲೂರು, ಶಿಲಾಯುಗ, ಬಂಡೆ ರೇಖಾಚಿತ್ರಗಳು, ಪ್ರಾಗೈತಿಹಾಸಿಕ ಕಲೆ*

## ಪೀಠಿಕೆ

ಶಿವಮೊಗ್ಗದಿಂದ ಪೂರ್ವಕ್ಕೆ ಹೊನ್ನಾಳಿ ಮಾರ್ಗದಲ್ಲಿ ಸುಮಾರು 20 ಕಿ.ಮೀ. ಸಾಗಿದರೆ ಕಂಡುಬರುವ ಗ್ರಾಮವೇ ಹೊಳಲೂರು. ಈ ಗ್ರಾಮವು ಭೂನಕ್ಷೆಯಲ್ಲಿ 14.640° ಅಕ್ಷಾಂಶ ಮತ್ತು 75.88° ರೇಖಾಂಶದ ನಡುವೆ ವ್ಯಾಪಿಸಿದೆ. ಗ್ರಾಮದ ಪೂರ್ವ ಭಾಗದಲ್ಲಿ ತುಂಗಭದ್ರಾ ನದಿಯು ಹರಿಯುತ್ತಿದ್ದು, ಅದು ಇಲ್ಲಿನ ಆರ್ಥಿಕ ಜೀವನಾಡಿಯಾಗಿದೆ. ಗ್ರಾಮದ ವಾಯುವ್ಯ ಭಾಗದಲ್ಲಿ ಬೆಟ್ಟ-ಗುಡ್ಡಗಳ ಸಾಲು ಕಂಡುಬರುತ್ತದೆ. ಇಲ್ಲಿನ ಭೂಮಿಯು ಕೆಂಪು ಮಿಶ್ರಿತ ಮರಳು ಮಣ್ಣು, ಕಪ್ಪು ಮಣ್ಣು ಹಾಗೂ ಜೇಡಿ ಮಣ್ಣಿನಿಂದ ಕೂಡಿದೆ. ಗ್ರಾಮದ ಪ್ರಸ್ತುತ ಭೌಗೋಳಿಕ ಪರಿಸರವನ್ನು ಗಮನಿಸಿದಾಗ, ಪ್ರಾಗೈತಿಹಾಸಿಕ ಕಾಲದಲ್ಲಿ ಮಾನವನು ನೆಲೆಸಲು ಈ ಪ್ರದೇಶವು ಸೂಕ್ತವಾಗಿದ್ದಿರಬಹುದೆಂದು ತಿಳಿದುಬರುತ್ತದೆ. ಪ್ರಾಗೈತಿಹಾಸಿಕ ಕಾಲದಿಂದ ಐತಿಹಾಸಿಕ ಕಾಲದವರೆಗಿನ ಮಾನವನ ಜೀವನವಿಕಾಸಕ್ಕೆ ಇಲ್ಲಿನ ಭೌಗೋಳಿಕ ಹಾಗೂ ನೈಸರ್ಗಿಕ ಪರಿಸರವು ಅನುಕೂಲಕರವಾಗಿತ್ತು.

***Please cite this article as:*** ತಿಪ್ಪೇಶ್, ಎಸ್. (2026). ಹೊಳಲೂರು ಮತ್ತು ಮಡಿಕೆ ಬೇಲೂರಿನ ಶಿಲಾಯುಗ ಕಾಲದ ಬಂಡೆ ರೇಖಾಚಿತ್ರ ವಿಶ್ಲೇಷಣೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್*, 5(3), 51–56

ಹೊಳಲೂರು ಪರಿಸರದಲ್ಲಿ ಮೂವತ್ತಕ್ಕೂ ಹೆಚ್ಚು ವಿವಿಧ ಪ್ರಾಣಿಗಳ ಬಂಡೆ ರೇಖಾಚಿತ್ರಗಳು ಪತ್ತೆಯಾಗಿವೆ. ಹೊಳಲೂರು–ಹೊನ್ನಾಳಿ ಮುಖ್ಯ ರಸ್ತೆಯ ಬಲಭಾಗಕ್ಕೆ ಸುಮಾರು 1 ಕಿ.ಮೀ. ಸಾಗಿದರೆ ತುಂಗಭದ್ರಾ ನದಿಯು ಕಂಡುಬರುತ್ತದೆ. ನದಿ ದಂಡೆಯಿಂದ ಸುಮಾರು 30 ಅಡಿ ದೂರದಲ್ಲಿರುವ ಬಂಡೆಗಳ ಮೇಲೆ ಗೀರುಚಿತ್ರಗಳು ಕಾಣಸಿಗುತ್ತವೆ. ಈ ಗೀರುಚಿತ್ರಗಳಿರುವ ಬಂಡೆಗಳಿಂದ ಸುಮಾರು 30 ಅಡಿ ದೂರದಲ್ಲಿ ಅ.ಸುಂದರ ಅವರು ಶೋಧಿಸಿರುವ ಗೀರುಚಿತ್ರಗಳನ್ನು ಹೊಂದಿರುವ 'ಆನೆ ಬಂಡೆ' ಇದೆ. ಆನೆ ಬಂಡೆಗಿಂತಲೂ ಕೆಳಸ್ತರದಲ್ಲಿ ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ ಗೀರುಚಿತ್ರಗಳನ್ನು ಹೊಂದಿರುವ ಮತ್ತಷ್ಟು ಬಂಡೆಗಳು ಪತ್ತೆಯಾಗಿವೆ.

**ಡುಬ್ಬವಿರುವ ಗೂಳಿ**

ಇಲ್ಲಿ ದೊರೆತಿರುವ ಗೀರು ಬಂಡೆ ಚಿತ್ರಗಳಲ್ಲಿಯೇ ಅತ್ಯಂತ ದೊಡ್ಡ ರೇಖಾಚಿತ್ರವಾಗಿದೆ. ಪೀಠದ ಮೇಲೆ ಮೂರು ರೇಖೆಗಳಿರುವ ತ್ರಿಶೂಲ ಮಾದರಿಯ ರೇಖಾ ಚಿತ್ರವು ಪೂರ್ವಕ್ಕೆ ಮುಖ ಮಾಡಿದೆ. ಅದರ ಮುಂಭಾಗದಲ್ಲಿ ಬಲಿಷ್ಠವಾದ ಉದ್ದ ಕೋಡುಗಳನ್ನು ಹೊಂದಿದ ಗೂಳಿಯು ಪಶ್ಚಿಮಕ್ಕೆ ಮುಖ ಮಾಡಿ ನಿಂತಿದೆ. ಗೂಳಿಯು 35ಸೆ.ಮೀ. ಎತ್ತರ 67 ಸೆ.ಮೀ. ಉದ್ದ ಹಾಗೂ 1 ಸೆ.ಮೀ. ದಪ್ಪದಲ್ಲಿ ಈ ಗೀರು ಚಿತ್ರವನ್ನು ಕೊರೆಯಲಾಗಿದೆ. ನಂದಿಯನ್ನು ಸುಂದರವಾಗಿ ಚಿತ್ರಿಸಿದ್ದು ಕಾಲುಗಳು ಸಮಗಾತ್ರದಲ್ಲಿವೆ. ನಂದಿಯು ಹೆಗಲ ಮೇಲೆ ಎತ್ತರವಾದ ಡುಬ್ಬವನ್ನು ಹೊಂದಿದೆ. ಕೋಡುಗಳು ನೇರವಾಗಿದ್ದು ಮೇಲ್ಭಾಗದಲ್ಲಿ ಒಂದಕ್ಕೊಂದು ತಾಗಿಕೊಂಡಂತೆ ಇದೆ. ಈ ರೇಖಾ ಚಿತ್ರದಲ್ಲಿ ಗೂಳಿಯ ಬಾಲವು ಸ್ಪಷ್ಟವಾಗಿ ಗೋಚರಿಸುತ್ತದೆ. ರೇಖಾ ಚಿತ್ರವನ್ನು ಗಮನಿಸಿದರೆ ತ್ರಿಶೂಲದ ಮುಂಭಾಗದಲ್ಲಿ ನಂದಿಯನ್ನು ನಿಲ್ಲಿಸಿದಂತೆ ಕಾಣುತ್ತದೆ. ಇದು ಪ್ರಾಗೈತಿಹಾಸಿಕ ಕಾಲದ ಧಾರ್ಮಿಕ ಅಂಶವನ್ನು ಪ್ರತಿನಿಧಿಸುತ್ತದೆ. ಧಾರ್ಮಿಕ ಸಂಪ್ರದಾಯವು ಪ್ರಾಗೈತಿಹಾಸಿಕ ಕಾಲದಿಂದಲೇ ಪ್ರಾರಂಭವಾಗಿದೆ ಎಂದು ಈ ರೇಖಾ ಚಿತ್ರವನ್ನು ಗಮನಿಸಿ ಊಹಿಸಬಹುದು. ಇನ್ನೊಂದು ಹಿನ್ನಲೆಯಲ್ಲಿ ತ್ರಿಶೂಲದಂತೆ ಕಾಣುವ ಈ ಆಯುಧವನ್ನು ಕೃಷಿಗೆ ಬಳಸಿಕೊಂಡಿರುವ ಸಾಧ್ಯತೆಯಿದೆ. ಹಾಗಾಗಿ ಆರ್ಥಿಕ ಹಿನ್ನಲೆಯಿಂದಲೂ ಈ ಗೀರು ಚಿತ್ರ ಮಹತ್ವದೆನಿಸುತ್ತದೆ.

**ಕುದುರೆ ಆಕಾರದ ರೇಖಾಚಿತ್ರ**

ಈ ರೇಖಾ ಚಿತ್ರವು ಪಶ್ಚಿಮಕ್ಕೆ ಮುಖ ಮಾಡಿ ನಿಂತಿದೆ. ಇದು 30 ಸೆಂ.ಮೀ. ಎತ್ತರ 80 ಸೆಂ.ಮೀ. ಉದ್ದ ಹಾಗೂ 1 ಸೆಂ.ಮೀ. ಆಳದ ಕೊರೆತವನ್ನು ಹೊಂದಿದೆ. ಈ ರೇಖಾ ಚಿತ್ರದ ನಾಲ್ಕು ಕಾಲುಗಳು ಸಮಗಾತ್ರದಲ್ಲಿದ್ದು ಬಾಲವು ಸ್ವಲ್ಪ ಉದ್ದವಾಗಿದೆ. ಜನನೇಂದ್ರೀಯವನ್ನು ಅತ್ಯಂತ ಉದ್ದವಾಗಿ ಚಿತ್ರಿಸಿರುವುದರಿಂದ ಇದನ್ನು ಅಶ್ವವೆಂದು ಊಹಿಸಬಹುದಾಗಿದೆ. ಈ ರೇಖಾ ಚಿತ್ರದ ಮೇಲ್ಭಾಗದಲ್ಲಿ ಬಾಲವನ್ನು ಹೊಂದಿದ ಅಸ್ಪಷ್ಟವಾದ ಇನ್ನೊಂದು ರೇಖಾ ಚಿತ್ರವು ಕಂಡು ಬರುತ್ತದೆ.

**ಆನೆಯ ರೇಖಾಚಿತ್ರ**

ಡುಬ್ಬವಿರುವ ಗೂಳಿಯ ಕೆಳಭಾಗದಲ್ಲಿ ಅಸ್ಪಷ್ಟವಾದ ಆನೆಯ ರೇಖಾ ಚಿತ್ರವಿದೆ. ಇದು 18 ಸೆಂ.ಮೀ. ಎತ್ತರ, 23ಸೆಂ.ಮೀ. ಉದ್ದ ಹಾಗೂ ಒಂದು ಸೆಂ.ಮೀ. ಆಳದ ರೇಖೆಯನ್ನು ಹೊಂದಿದೆ. ಆನೆಯ ರುಂಡವು ವೃತ್ತಾಕಾರದಲ್ಲಿದ್ದು ತನ್ನ ಸೊಂಡಿಲನ್ನು ಕೆಳಗೆ ಇಳಿಬಿಟ್ಟಿದೆ. ಆನೆಯ ದೇಹವು ಸಮಗಾತ್ರದಲ್ಲಿರುವಂತೆ ರೇಖೆಗಳನ್ನು ಎಳೆಯಲಾಗಿದೆ.

**ನಾಯಿ ರೇಖಾಚಿತ್ರ**

ಪ್ರಾಗೈತಿಹಾಸಿಕ ಮಾನವನಿಗೆ ಸಾಕು ಪ್ರಾಣಿಯಾದ ನಾಯಿಯ ಪರಿಚಯವಿತ್ತೆಂದು ಹಲವಾರು ಪುರಾತತ್ವ ನೆಲೆಗಳ ಉತ್ಖನನಗಳಿಂದ ದೃಢಪಟ್ಟಿದೆ. ಈ ನೆಲೆಯಲ್ಲಿ ಪ್ರಾಗೈತಿಹಾಸದ ಮಾನವನು ಶ್ವಾನದ ರೇಖಾಚಿತ್ರವನ್ನು ಬಿಡಿಸಿದ್ದಾರೆ. ಈ ರೇಖಾಚಿತ್ರವು 15 ಸೆಂ.ಮೀ. ಎತ್ತರ, 24 ಸೆಂ.ಮೀ. ಉದ್ದ ಹಾಗೂ 1 ಸೆಂ.ಮೀ. ಆಳದ ಕೊರೆತವನ್ನು ಬಂಡೆಗಲ್ಲಿನ ಮೇಲೆ

ಹೊಂದಿದೆ. ನಾಯಿಯ ಗೋಣು ಸ್ವಲ್ಪ ಬಾಗಿದಂತೆ ಚಿತ್ರಿಸಲಾಗಿದೆ. ಹಾಗೆಯೇ ಬಾಲವು ಮೇಲಕ್ಕೆ ಡೊಂಕಾಗಿರುವುದನ್ನು ಕಾಣಬಹುದಾಗಿದೆ.

**ನಂದಿ ರೇಖಾಚಿತ್ರ**

ಈ ರೇಖಾಚಿತ್ರವು ಪೂರ್ವಕ್ಕೆ ಮುಖ ಮಾಡಿ ನಿಂತಿರುವಂತೆ ಚಿತ್ರಿಸಲಾಗಿದೆ. ನಂದಿಯ ಕೋಡುಗಳು ನೇರವಾಗಿದ್ದು ತಲೆಯನ್ನು ಎತ್ತಿರುವಂತೆ ಕಾಣುತ್ತದೆ. ನಂದಿಯ ದೇಹ ಭಾಗವು ಸ್ವಲ್ಪ ದೊಡ್ಡ ಗಾತ್ರದಲ್ಲಿದ್ದು ಕಾಲುಗಳು ಸಮ ಗಾತ್ರದಲ್ಲಿವೆ. ಜನನೇಂದ್ರೀಯ ಭಾಗವನ್ನು ಒಂದು ಸರಳ ರೇಖೆಯಂತೆ ಚಿತ್ರಿಸಲಾಗಿದೆ. ನಂದಿಯ ಚಿತ್ರವು 33 ಸೆಂ.ಮೀ. ಎತ್ತರ. 30 ಸೆಂ.ಮೀ. ಉದ್ದ ಹಾಗೂ 1 ಸೆಂ.ಮೀ., ಆಳದ ಕೊರೆತವನ್ನು ಬಂಡೆಗಲ್ಲಿನ ಮೇಲೆ ಮಾಡಲಾಗಿದೆ.

**ನಾಯಿಯನ್ನು ಹೋಲುವ ರೇಖಾಚಿತ್ರ**

ಈ ರೇಖಾಚಿತ್ರದ ದೇಹವನ್ನು ಪಶ್ಚಿಮ ಭಾಗಕ್ಕಿರುವಂತೆ ಚಿತ್ರಿಸಲಾಗಿದೆ. ಪ್ರಾಣಿಯ ಹೊಟ್ಟೆ ಮತ್ತು ಕಾಲುಗಳು ಸಮಗಾತ್ರದಲ್ಲಿದ್ದು ಶಿರೋಭಾಗವಿಲ್ಲದ ಕುತ್ತಿಗೆಯನ್ನು ಕೊರೆಯಲಾಗಿದೆ. ಬಾಲವನ್ನು ಮೇಲಕ್ಕೆ ಎತ್ತಿದ್ದು ಡೊಂಕಾಗಿದೆ. ಹಿಂಬದಿಯ ಬಲಗಾಲಿನ ಮುಂಭಾಗದಲ್ಲಿ ವೃಷಣವನ್ನು ತೋರಿಸಲಾಗಿದೆ. ಈ ರೇಖಾ ಚಿತ್ರವು 27ಸೆಂ.ಮೀ. ಎತ್ತರ, 34 ಸೆಂ.ಮೀ. ಉದ್ದ ಹಾಗೂ 1 ಸೆಂ.ಮೀ. ಆಳದ ಕೊರೆತವನ್ನು ಬಂಡೆಗಲ್ಲಿನ ಮೇಲೆ ಹೊಂದಿದೆ.

**ಮಾನವನ ರೇಖಾಚಿತ್ರ**

ಇದು ಪೂರ್ವ ದಿಕ್ಕಿನ ಕಡೆಗೆ ದಿಟ್ಟ ಮುಖ ಮಾಡಿ ನಿಂತ ಭಂಗಿಯಲ್ಲಿದೆ. ಇದು 61 ಸೆಂ.ಮೀ. ಎತ್ತರ, 27 ಸೆಂ.ಮೀ. ಉದ್ದ ಹಾಗೂ 2 ಸೆಂ.ಮೀ. ಆಳ ಕೊರೆದ ರೇಖೆಯನ್ನು ಹೊಂದಿದೆ. ಪುಷ್ಪಕಾಯವನ್ನು ಹೊಂದಿರುವ ಮಾನವನ್ನು ತನ್ನ ಬಲಗೈಯನ್ನು ಸೊಂಟದ ಮೇಲೆ ಇರಿಸಿಕೊಂಡಿದ್ದು ಎಡಗೈಯನ್ನು ಮೇಲಕ್ಕೆ ಎತ್ತಿದ್ದಾನೆ. ತೊಡೆಯ ಭಾಗವು ದಪ್ಪವಿದ್ದು (ಬಟ್ಟೆಯನ್ನು ಧರಿಸುವಂತೆ ಚಿತ್ರಿಸಲಾಗಿದೆ) ಕೆಳಗೆ ಸಾಗಿದಂತೆ ಕಿರಿದಾಗಿರುವುದನ್ನು ಗಮನಿಸಬಹುದು. ಈ ಮಾನವ ಆಕೃತಿಯ ಹಿಂಭಾಗದ ಬಂಡೆಯ ಮೇಲೆ ದಕ್ಷಿಣಕ್ಕೆ ಮುಖ ಮಾಡಿ ನಿಂತ ಮತ್ತೊಂದು ಮಾನವ ರೇಖಾ ಚಿತ್ರ ಕಂಡು ಬರುತ್ತದೆ. ಈ ಮಾನವ ಆಕೃತಿಯು 50 ಸೆಂ.ಮೀ. ಎತ್ತರ, 24 ಸೆಂ.ಮೀ. ಉದ್ದ ಹಾಗೂ 1 ಸೆಂ.ಮೀ. ಆಳದಿ ಕೊರೆದ ರೇಖಾ ಚಿತ್ರವಾಗಿದೆ. ತನ್ನ ಎರಡು ಕೈ ಮತ್ತು ಕಾಲುಗಳನ್ನು ಅಗಲ ಮಾಡಿ ನಿಂತ ಭಂಗಿಯಲ್ಲಿದೆ. ಈ ಆಕೃತಿಯ ಮಧ್ಯಭಾಗದಲ್ಲಿ ಗುಣಾಕಾರ ಚಿಹ್ನೆಯು ಈ ಗೀರು ಚಿತ್ರವನ್ನು ಪೂರ್ಣಗೊಳಿಸುತ್ತದೆ. ಈ ರೇಖಾ ಚಿತ್ರವಿರುವ ಬಂಡೆಯ ಬಲಭಾಗದಲ್ಲಿ ದೊಡ್ಡ ಬಂಡೆಯೊಂದಿದೆ. ಆ ಬಂಡೆಯು 16 ರಿಂದ 22 ವರೆಗಿನ ರೇಖಾ ಚಿತ್ರಗಳು ಒಂದೇ ಸಾಲಿನಲ್ಲಿ ಕಂಡು ಬರುತ್ತದೆ. ಈ ರೇಖಾ ಚಿತ್ರಗಳು ಗುಡಿಸಲಿನಿಂದ ಪಶುಗಳು ಮೇಯಲು ಹೋಗುತ್ತಿರುವ ದೃಶ್ಯವನ್ನು ಪ್ರತಿಬಿಂಬಿಸುತ್ತದೆ. ಈ ಪಶುಗಳ ಕೊನೆಯಲ್ಲಿ ನಾಯಿಯೊಂದು ಇವುಗಳನ್ನು ಹಿಂಬಾಲಿಸುತ್ತಿರುವಂತೆ ಚಿತ್ರಿಸಲಾಗಿದೆ. ಈ ಮೊದಲು ವಿಶ್ಲೇಷಿಸಿದ ರೇಖಾ ಚಿತ್ರಗಳಿಗಿಂತೆ ಇಲ್ಲಿರುವ ಗೀರು ಚಿತ್ರಗಳನ್ನು ಅತ್ಯಂತ ಸ್ಪಷ್ಟ ಮತ್ತು ಸುಂದರವಾಗಿ ಕೊರೆಯಲಾಗಿದೆ. ಇಲ್ಲಿ ಕಲಾಕಾರನು ಹೆಚ್ಚು ನೈಪುಣ್ಯತೆಯನ್ನು ಹೊಂದಿ ಈ ಚಿತ್ರಗಳನ್ನು ಬಿಡಿಸಿದಂತಿದೆ.

**ಚೆನ್ನಮಣಿ ಮಾದರಿಯ ಕುಳಿಗಳು**

ಹೊಳಲೂರಿನ ಗೀರು ಚಿತ್ರಗಳಿರುವ ಬಂಡೆಗಳ ಕೆಳಭಾಗದಲ್ಲಿರುವ ಕಲ್ಲಿನ ಮೇಲೆ ಚೆನ್ನೆಮಣಿಯಾಟದ ರಚನೆಯನ್ನು ಹೋಲುವ 20 ಕುಳಿಗಳಿದ್ದು ಮಾನವನು ತನ್ನ ದೈನಂದಿನ ಜೀವನದಲ್ಲಿ ಮನೋರಂಜನೆಗಾಗಿ ತಯಾರಿಸುವುಗಳಾಗಿವೆ. ನಂತರದ ಕಾಲದಲ್ಲಿ ಇವುಗಳ ಸೂಕ್ಷ್ಮತೆಯನ್ನು ಪಡೆದು ನೂತನ ಆಟಗಳ ಹುಟ್ಟಿನೊಂದಿಗೆ ಕೇವಲ ಆಟಗಳಾಗಿ ಉಳಿಯದೆ, ಸಾಮಾಜಿಕ ಜೀವನದಲ್ಲಿ ಧಾರ್ಮಿಕ ಆಚರಣೆಯಾಗಿ ಮುಂದುವರೆಸಿಕೊಂಡು

ಬಂದಿರುತ್ತದೆ. ತುಳುನಾಡಿನಲ್ಲಿ ಚೆನ್ನಮಣೆಯಾಟವು ಪ್ರಮುಖ ಆಟವಾಗಿದೆ. 'ಚೆನ್ನ' ಎಂದರೆ 'ಸುಂದರ' ಎಂಬ ಅರ್ಥವನ್ನು ಹೊಂದಿದೆ. ತುಳುನಾಡಿನಲ್ಲಿ ಈ ರೀತಿಯ ಮಣೆಯು ಪ್ರಮುಖವಾಗಿ 14 ಕೋಣೆಗಳನ್ನು ಹೊಂದಿದ್ದು ಇತರ ಪ್ರದೇಶಗಳಲ್ಲಿ ಅವುಗಳ ಸಂಖ್ಯೆಯಲ್ಲಿ ವ್ಯತ್ಯಾಸವನ್ನು ಕಾಣಬಹುದಾಗಿದೆ. ಈ ಬಂಡೆಯ ಮಧ್ಯದ ಕುಳಿ ನಾಲ್ಕುವರೆ ಇಂಚು ಆಳವನ್ನು ಹೊಂದಿದೆ. ಬೇರೆ ಬೇರೆ ಕಾರ್ಯಗಳಿಗೆ ಬಳಸಿಕೊಂಡಿರಬಹುದು. ಅದರಿಂದ ಮುಂಭಾಗದಲ್ಲಿರುವ ಬಂಡೆಯ ಮೇಲೆ ಒಂದು ಪಕ್ಕದಲ್ಲಿ ಒಂದರಂತೆ ನಾಲ್ಕು ಕುಳಿಗಳನ್ನು ಕೊರೆಯಲಾಗಿದೆ. ಈ ಕುಳಿಗಳು ಸುಮಾರು ಮೂರುವರೆ ಇಂಚು ಆಳವನ್ನು ಹೊಂದಿದೆ. ಈ ಕುಳಿಗಳಿಂದ ಸ್ವಲ್ಪ ಕೆಳಭಾಗದಲ್ಲಿ ನಾಲ್ಕು ಕುಳಿಗಳು ಕಂಡುಬರುತ್ತದೆ. ಚೌಕಾಕಾರದ 10 ಮನೆಯನ್ನು ಹೊಂದಿರುವ ಚೆನ್ನಮಣೆಯನ್ನು ಹೋಲುವ ರೇಖಾಚಿತ್ರವು ಕಂಡುಬಂದಿದೆ.

**ಮಡಿಕೆ ಬೇಲೂರಿನ ಬಂಡೆ ಚಿತ್ರಗಳು**

ಮಡಿಕೆ ಬೇಲೂರು ಹೊನ್ನಾಳಿಯಿಂದ ಶಿವಮೊಗ್ಗಕ್ಕೆ ಹೋಗುವ ರಸ್ತೆಯಲ್ಲಿ 21 ಕಿ.ಮೀ. ದೂರದಲ್ಲಿದೆ. ಅಧ್ಯಯನ ವ್ಯಾಪ್ತಿಯ ಪ್ರದೇಶವಾದ ಮಡಿಕೆ ಬೇಲೂರಿನಲ್ಲಿ ಪ್ರಾಗೈತಿಹಾಸಿಕ ಕಾಲದ ಬಂಡೆ ಚಿತ್ರಗಳನ್ನು ಬಿ.ಎನ್. ದೊಡ್ಡಪ್ಪ ಅವರು ಶೋಧಿಸಿರುತ್ತಾರೆ. ಈ ಬಂಡೆಚಿತ್ರಗಳನ್ನು ಹೊರತು ಪಡಿಸಿ ಕ್ಷೇತ್ರಕಾರ್ಯದಲ್ಲಿ ಮತ್ತೆ ಕೆಲವು ರೇಖಾಚಿತ್ರಗಳು ಪತ್ತೆಯಾಗಿವೆ. ಮೊದಲ ಬಾರಿಗೆ ಬಿ.ಎನ್. ದೊಡ್ಡಪ್ಪ ಅವರು ತುಂಗಭದ್ರ ನದಿಯ ಎಡ ದಂಡೆಯ ಮೇಲಿರುವ ಬಂಡೆಯ ಮೇಲೆ ಪ್ರಾಗೈತಿಹಾಸಿಕ ಮಾನವನು ಕೊರೆದು ಮೂಡಿಸಿದ ಮೂರು ಜಿಂಕೆಯ ರೇಖಾಚಿತ್ರಗಳನ್ನು ಶೋಧಿಸಿದ್ದರು. ಈ ರೇಖಾಚಿತ್ರಗಳು 25 ಸೆಂ.ಮೀ. ಉದ್ದ ಮತ್ತು ಅಗಲ 2ಸೆಂ.ಮೀ. ಆಳದ ಗೆರೆಯನ್ನು ಹೊಂದಿದೆ. ಎಂದು ತಿಳಿಸಿರುವುದು ವರದಿಯಾಗಿದೆ. ಇವುಗಳನ್ನು ಹೊರತು ಪಡಿಸಿ ಕ್ಷೇತ್ರಕಾರ್ಯ ಸಂದರ್ಭದಲ್ಲಿ ದೊಡ್ಡಪ್ಪನವರು ಶೋಧಿಸಿದ ಬಂಡೆಯ ಪಶ್ಚಿಮಕ್ಕೆ ಇರುವ ಮತ್ತೊಂದು ಬಂಡೆಯ ಕೆಳ ಅಂಚಿನಲ್ಲಿ ನಾಲ್ಕು ರೇಖಾಚಿತ್ರಗಳನ್ನು ಕೊರೆಯಲಾಗಿದೆ. ಇವುಗಳನ್ನು ಅಧ್ಯಯನದ ದೃಷ್ಟಿಯಿಂದ ಹೆಚ್.ಎಮ್.ಆರ್–1 ನಿಂದ ಹೆಚ್.ಎಮ್.ಆರ್–4 (ಹೊನ್ನಾಳಿಯ ಮಡಿಕೆ ಬೇಲೂರಿನ ರಾಕ್ ಆರ್ಟ್) ಎಂಬ ಸಂಕೇತಗಳನ್ನು ನೀಡಲಾಗಿದೆ.

**ಕುದುರೆಯ ರೇಖಾಚಿತ್ರ**

ಕುದುರೆಯ ರೇಖಾ ಚಿತ್ರವೂ 20 ಸೆಂ.ಮೀ. ಅಗಲ, 25 ಸೆಂ.ಮೀ. ಉದ್ದ ಹಾಗೂ 1 ಸೆಂ.ಮೀ. ಆಳದ ಅಳತೆಯನ್ನು ಹೊಂದಿದೆ. ಈ ರೇಖಾ ಚಿತ್ರವು ಪಶ್ಚಿಮಕ್ಕೆ ಮುಖ ಮಾಡಿ ನಿಂತಿದೆ. ಮುಂದಿನ ಮತ್ತು ಹಿಂದಿನ ಎರಡು ಕಾಲುಗಳನ್ನು ಜೋಡಿಸಿದ ರೀತಿಯಲ್ಲಿ ಚಿತ್ರವನ್ನು ಬಿಡಿಸಲಾಗಿದೆ. ಗಾತ್ರಕ್ಕೆ ತಕ್ಕ ಹಾಗೆ ಸಣ್ಣ ಬಾಲವನ್ನು ತೋರಿಸಲಾಗಿದೆ.

**ಗೂಳಿ ರೇಖಾಚಿತ್ರಗಳು**

ಮೂರು ಗೂಳಿಗಳು ಪಶ್ಚಿಮಕ್ಕೆ ಮುಖ ಮಾಡಿ ನಿಂತಿವೆ. ಗೂಳಿಗಳಿಗೆ ನೀಲವಾದ ಕೋಡು, ಡುಬ್ಬ ಹಾಗೂ ಬಾಲವನ್ನು ಕೊರೆಯಲಾಗಿದ್ದು ಎರಡು ಗೂಳಿಯ ಮುಂಬದಿ ಮತ್ತು ಹಿಂಬದಿಯ ಕಾಲುಗಳು ಜೋಡಿಸಿವಂತೆ ಇದ್ದು ಸಮ ಗಾತ್ರದಲ್ಲಿವೆ. ಈ ಗೂಳಿಯ ರೇಖಾಚಿತ್ರಗಳು ಹೊಳಲೂರಿನ ರೇಖಾಚಿತ್ರ ಮಾದರಿಯಲ್ಲೆ ಇದ್ದು ಕಬ್ಬಿಣ ಯುಗ ಪ್ರಾರಂಭ ಅವಧಿಯ ನೂತನ ಶಿಲಾಯುಗ ಕಾಲಾವಧಿ ಸೇರಿದ ರೇಖಾಚಿತ್ರಗಳಾಗಿದೆ.

**ಕುಳಿಗಳು**

ಮಡಿಕೆ ಬೇಲೂರಿನ ತುಂಗಭಧ್ರಾ ನದಿಯ ರೇಖಾಚಿತ್ರಗಳು ದೊರೆತ ಬಂಡೆಯ ಪಕ್ಕದಲ್ಲಿಯೇ ಮತ್ತೊಂದು ಬಂಡೆಯ ಮೇಲೆ 5 ಕುಳಿಗಳು ಇರುವುದು ಕಂಡುಬಂದಿದೆ. ಈ ಕುಳಿಗಳನ್ನು ಪ್ರಾಗೈತಿಹಾಸಿಕ ಮಾನವನು ದವಸ ಧಾನ್ಯಗಳ

ಹೊಟ್ಟನ್ನು ತೆಗೆಯಲು ನಿರ್ಮಾಣ ಮಾಡಿದ್ದಂತೆ ತೋರುತ್ತದೆ.

**ವಿಶ್ಲೇಷಣೆ**

ಬಂಡೆಚಿತ್ರಗಳ ಕಾಲಮಾನವನ್ನು ನಿಖರವಾಗಿ ಗುರುತಿಸುವುದು ಕಷ್ಟವಾಗಿದೆ. ಈ ಬಂಡೆಚಿತ್ರಗಳ ಕಾಲಮಾನವನ್ನು ಅಳೆಯಲು ಯಾವುದೇ ವೈಜ್ಞಾನಿಕ ತಂತ್ರಜ್ಞಾನಗಳಿಲ್ಲ. ಸಾಪೇಕ್ಷ ಕಾಲಗಣನೆಯನ್ನು ಮಾಡುವುದರ ಮುಖಾಂತರ ಆ ನೆಲೆಯಲ್ಲಿ ದೊರೆಯುವ ಅವಶೇಷಗಳಾದ ಮಡಿಕೆ, ಶಿಲಾಯುಧಗಳು, ಇತರ ಪ್ರಾಚ್ಯಾವಶೇಷಗಳ ಮೂಲಕವಾಗಿ ಬಂಡೆ ಚಿತ್ರಗಳ ಕಾಲ ನಿರ್ಣಯವನ್ನು ಮಾಡಬೇಕಾಗುತ್ತದೆ. ಸುಂದರ ಅವರು ಹೊಳಲೂರಿನ ಆನೆಯ ಬಂಡೆ ಚಿತ್ರಗಳನ್ನು ನೂತನ ಶಿಲಾಯುಗದ ಕಾಲಮಾನಕ್ಕೆ ಸೇರಿದ್ದವು ಎಂದು ವಿಶ್ಲೇಷಿಸುತ್ತಾರೆ. ಹೊಸದಾಗಿ ಪತ್ತೆಯಾಗಿರುವ ಮೂವತ್ತಕ್ಕೂ ಹೆಚ್ಚಿನ ಬಂಡೆ ಚಿತ್ರಗಳು ಹಾಗೂ ಈ ಮೊದಲು ಜಯದೇವಪ್ಪ ಜೈನಕೇರಿ ಅವರು ಶೋಧಿಸಿದ ಬಂಡೆ ಚಿತ್ರಗಳು ಬೃಹತ್ ಶಿಲಾಯುಗ ಕಾಲಕ್ಕೆ ಸಂಬಂಧಿಸಿದ ಗೀರು ಚಿತ್ರಗಳಾಗಿವೆ. ಏಕೆಂದರೆ ಅವರು ಶೋಧಿಸಿದ ಗೀರು ಚಿತ್ರಗಳಿಗಿಂತ ಹೊಸದಾಗಿ ಶೋಧಿಸಲ್ಪಟ್ಟ ಈ ಬಂಡೆ ಚಿತ್ರಗಳು ಹೆಚ್ಚು ಆಳವನ್ನು ಹೊಂದಿದೆ. ಹಾಗೂ ಆನೆಯ ಬಂಡೆಯಲ್ಲಿ ದೊರೆತಿರುವ ಗೂಳಿಗಳ ರೇಖಾಚಿತ್ರಗಳಿಗಿಂತ ಸ್ಪಷ್ಟ ರೂಪವನ್ನು ಪಡೆದಿವೆ. ಈ ಬಂಡೆ ಚಿತ್ರಗಳು ಹಾಗೂ ಕಲ್ಲಿನ ಕುಳಿಗಳನ್ನು ಗಮನಿಸಿದರೆ ಸುಧಾರಿತ ವ್ಯವಸಾಯವನ್ನು ಬಲ್ಲ ಪ್ರಾಗೈತಿಹಾಸದ ಮಾನವ ಇವುಗಳನ್ನು ಕೊರೆದಂತೆ ತೋರುತ್ತದೆ. ಅಲ್ಲದೆ ಇವುಗಳನ್ನು ಕೊರೆಯಲು ಕಬ್ಬಿಣದಂತಹ ಗಡುಸಾದ ಆಯುಧವನ್ನೇ ಬಳಸಿರುವ ಸಾಧ್ಯತೆ ಹೆಚ್ಚಿದೆ. ಏಕೆಂದರೆ ಈ ಚಿತ್ರಗಳನ್ನು ಕೊರೆದಿರುವ ಕಲ್ಲು ಬ್ಲ್ಯಾಕ್‌ಬಸಾಲ್ಟ್ ಮಾದರಿಯ ಶಿಲೆಯಾಗಿದೆ. ಇವುಗಳ ಮೇಲೆ ಕಲ್ಲಿನಿಂದ ಉಜ್ಜಿ ಅಥವಾ ಗೀರು ಚಿತ್ರಗಳನ್ನು ಬಿಡಿಸುವುದು ಕಷ್ಟ ಅಸಾಧ್ಯ. ಹಾಗಾಗಿ ಕಬ್ಬಿಣ ಆಯುಧಗಳ ಉಪಯೋಗವನ್ನು ಬೃಹತ್ ಶಿಲಾಯುಗದ ಮಾನವನೇ ಈ ಬಂಡೆ ಚಿತ್ರಗಳನ್ನು ಕೊರೆದಂತೆ ತೋರುತ್ತದೆ. ಈ ಜನರು ಸುಧಾರಿತ ಬೇಸಾಯ ಕ್ರಮವನ್ನು ಬಲ್ಲವರಾಗಿದ್ದರು ಹಾಗಾಗಿ ಇಲ್ಲಿನ ಹೆಚ್ಚಿನ ಚಿತ್ರಗಳಲ್ಲಿ ಗೂಳಿಯನ್ನೇ ಪ್ರತಿನಿಧಿಸಿದ್ದಾರೆ. ಅಲ್ಲಿರುವ ಕಲ್ಲಿನ ಕುಳಿಗಳು ನದಿ ಮುಖಜ ಭೂಮಿಯಲ್ಲಿ ಬೆಳೆದ ಆಹಾರ ಧಾನ್ಯಗಳ ಹೊಟ್ಟು ಮುಂತಾದವುಗಳನ್ನು ತೆಗೆಯಲು ಬಳಸಿಕೊಂಡಂತೆ ತೋರುತ್ತದೆ. ಹೊಳಲೂರಿನಲ್ಲಿ ಮಾತ್ರವಲ್ಲದೆ ಕರ್ನಾಟಕ ವಿವಿಧ ಭಾಗದ ಬೃಹತ್ ಶಿಲಾಯುಗದ ನೆಲೆಗಳಲ್ಲಿ ಈ ಕಾಲದ ಜನರು ತಯಾರಿಸಿದ ಆಯುಧಗಳಾದ ಈಟಿ, ಭರ್ಚಿ, ಕತ್ತಿ ಬಾಣದ ಮೊನೆಗಳು, ಕಬ್ಬಿಣದ ನೇಗಿಲ ಕುಳ, ಕುಡುಗೋಲು ಇತ್ಯಾದಿ ಅವಶೇಷಗಳು ದೊರೆತಿದ್ದು ಅವುಗಳ ಆಧಾರದ ಮೇಲೆ ಈ ಸಂಸ್ಕೃತಿಯ ಜನರು ಸುಧಾರಿತ ವ್ಯವಸಾಯವನ್ನು ಅವಲಂಬಿಸಿದ್ದರು ಎಂದು ತಿಳಿಯಬಹುದು. ಅಲ್ಲದೆ ಈ ಸಂಸ್ಕೃತಿಯ ಜನರು ಗೋಧಿ, ಭತ್ತ, ರಾಗಿ, ನವಣೆ, ಇತ್ಯಾದಿ ದವಸ–ಧಾನ್ಯಗಳನ್ನು ಬೆಳೆಯುತ್ತಿದ್ದರು ಎಂಬುದಕ್ಕೆ ಸಾಕ್ಷಿಗಳು ಲಭ್ಯವಾಗಿದೆ. ಇವುಗಳ ಆಧಾರದ ಮೇಲೆ ಹೊಳಲೂರಿನ ಬಂಡೆ ಚಿತ್ರಗಳು ಸಹ ಬೃಹತ್ ಶಿಲಾಯುಗ ಆರಂಭ ಕಾಲದ ನೂತನ ಶಿಲಾಯುಗದ ಮಾನವನ ರಚನೆಯೆಂದು ದೃಢವಾಗಿ ಹೇಳಬಹುದು.

**ಪರಾಮರ್ಶನ ಗ್ರಂಥಗಳು**


- ಚೈಲ್ಡ್ ಗೋರ್ಡಾನ್. (1956). *ಲೈನ್ ಇಂಟ್ರಡಕ್ಷನ್ ಟು ಪ್ರೀ ಹಿಸ್ಟಾರಿಕ್ ಆರ್ಕಿಯಾಲಜಿ.* ಪು.ಸಂ. 1–5
- ರಾಜಾರಾಮ್ ಹೆಗಡೆ. (2005). *ಭಾರತದಲ್ಲಿ ಪ್ರಾಕ್ತನಶಾಸ್ತ್ರ.* ಪು.ಸಂ.88–97
- ರಾಬರ್ಟ್ ಬ್ರೂಸ್‌ಪೂಟ್. (1916). *ಇಂಡಿಯನ್ ಪ್ರೀ ಹಿಸ್ಟರಿ ಅಂಡ್ ಪ್ರೋಟೋ ಹಿಸ್ಟಾರಿಕ್ ಆಂಟಿಕ್ವಿಟಿ.* ಪು.ಸಂ–4–77

- ಪೂಣಚ್ಚ, ಕೆ.ಪಿ. (1990). *ಆರ್ಕಿಯಾಲಜಿ ಆಫ್ ಮಲ್ನಾಡ್ ರೀಜನ್.* ಪು.ಸಂ.155–156
- ಶರಣ ಬಸಪ್ಪ ಕೋಲ್ಕಾರ್. (2010). *ಶಿಲಾಯುಗದ ಗವಿ ಚಿತ್ರಗಳು.* ಪು.ಸಂ.1–13
- ದೊಡ್ಡಪ್ಪ ಬಿ.ಎನ್. (2013). *ಮಡಿಕೆ ಬೇಲೂರಿನ ರೇಖಾಚಿತ್ರಗಳ ಒಂದು ಹೊಸ ಶೋಧ.* ಪು.ಸಂ. 55